ಕರ್ನಾಟಕ ಸರ್ಕಾರ

ಸಂಖ್ಯೆ:ಲೋಇ 466 ಸಿಆರ್‌ಎಂ 2022(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:30.06.2022

## ಸುತ್ತೋಲೆ

ವಿಷಯ: ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ಕಟ್ಟಡ ನಿಯಂತ್ರಣ ರೇಖೆಯನ್ನು ಗುರುತಿಸುವ ಕುರಿತು

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:PWD 362 CRM 98 ದಿನಾಂಕ: 09.10.1998
2. ಸರ್ಕಾರದ ಆದೇಶ ಸಂಖ್ಯೆ:PWD 44 CRM 99 ದಿನಾಂಕ: 16.11.2002
3. ಸರ್ಕಾರದ ಆದೇಶ ಸಂಖ್ಯೆ:PWD 23 RDF 2004 ದಿನಾಂಕ: 18.10.2004

********

ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ, ಸುಧಾರಣೆ ಮತ್ತು ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ ಹಾಗೂ ರಾಷ್ಟ್ರೀಯ ಹೆದ್ದಾರಿಯ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಕೈಗೊಳ್ಳಲಾಗುತ್ತಿದೆ. 'ಇಂಡಿಯನ್ ರೋಡ್ ಕಾಂಗ್ರೆಸ್' ನ ವಿಶೇಷ ಪ್ರಕಟಣೆ 15 ರನ್ವಯ ರಾಜ್ಯ ಹೆದ್ದಾರಿಗಳ ಅಕ್ಕ-ಪಕ್ಕಗಳಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣ ಮತ್ತು ಅದರ ತಡೆ (Prevention of Ribbon Development along Highways) ಇದರ ಉಧೃತ ಭಾಗ ಕೋಷ್ಟಕ (1) ಮತ್ತು (2) ರಲ್ಲಿ ಎಲ್ಲಾ ವರ್ಗದ ರಸ್ತೆಗಳನ್ನು ಗಣನೆಗೆ ತೆಗೆದುಕೊಂಡು ಸೂಕ್ತ ಪ್ರಮಾಣದ ಷರತ್ತುಗಳನ್ನು ಅಳವಡಿಸಲಾಗಿದೆ.

ಈ IRC ಪ್ರಮಾಣವನ್ನು ಪರಿಗಣನೆಗೆ ತೆಗೆದುಕೊಂಡು ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಕ್ಕಪಕ್ಕಗಳಲ್ಲಿ ರಸ್ತೆಭೂಮಿಯಲ್ಲಿ ಅನಧಿಕೃತ ಕಟ್ಟಡಗಳು ನಿರ್ಮಾಣವಾಗುತ್ತಿರುವುದು ಮತ್ತು ರಸ್ತೆಗೆ ಸೇರಿದ ಭೂಮಿಯು ಅತಿಕ್ರಮಣವಾಗುತ್ತಿರುವುದನ್ನು ತಡೆಗಟ್ಟುವ ಹಿನ್ನಲೆಯಲ್ಲಿ ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ, 5 ಕ್ರಮಗಳನ್ನು ಪಾಲಿಸುವಂತೆ ಆದೇಶ ನೀಡಲಾಗಿದ್ದು ಅದರಲ್ಲಿ ಕ್ರಮ ಸಂಖ್ಯೆ 1 ಈ ಕೆಳಕಂಡಂತಿರುತ್ತದೆ.

(1) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಕ್ಕಪಕ್ಕಗಳಲ್ಲಿ ರಸ್ತೆ ಮಧ್ಯಭಾಗದಿಂದ ಈ ಕೆಳಗೆ ಸೂಚಿಸಿರುವ ಅಗಲಕ್ಕೆ ಯಾವ ಕಟ್ಟಡಗಳನ್ನು ನಿರ್ಮಿಸಕೂಡದು.

ಅಲ್ಲದೆ, ಈ ಪರಿಮಿತಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಮತ್ತು ಅಂಗಡಿಗಳು, ಉಪಹಾರಗೃಹಗಳು, ಹೋಟೆಲ್‌ಗಳು ಮುಂತಾದವುಗಳನ್ನು ನಡೆಸುವುದಕ್ಕೆ ಅನುಮತಿಯನ್ನು ಕೊಡಕೂಡದೆಂದು ಸೂಚಿಸಲಾಗಿರುತ್ತದೆ.

| ರಸ್ತೆಯ ವಿಧ | ರಸ್ತೆಯ ಮಧ್ಯಭಾಗದಿಂದ ನಿಗಧಿಪಡಿಸಿದ ದೂರ |
|---|---|
| ಅ) ರಾಷ್ಟ್ರೀಯ ಹೆದ್ದಾರಿಗಳು | 40 ಮೀಟರ್ |
| ಆ) ರಾಜ್ಯ ಹೆದ್ದಾರಿಗಳು | 40 ಮೀಟರ್ |
| ಇ) ಮುಖ್ಯ ಜಿಲ್ಲಾ ರಸ್ತೆಗಳು | 25 ಮೀಟರ್ |

ತದನಂತರ, ರಾಜ್ಯ ಲೋಕೋಪಯೋಗಿ ಇಲಾಖೆಯು ಉಲ್ಲೇಖ (2) ರ ಆದೇಶದಲ್ಲಿ ನಗರ: ಪಟ್ಟಣ: ಗ್ರಾಮಗಳ ಪರಿಮಿತಿ ಹಾಗೂ ಇತರ "ಆಕ್ಷೇಪಿತ" ಪ್ರದೇಶಗಳಲ್ಲಿ ರಾಜ್ಯ ಹೆದ್ದಾರಿಗಳಲ್ಲಿ "ಗಡಿ ರೇಖೆ" ಮತ್ತು "ಕಟ್ಟಡ ರೇಖೆ"ಗಳನ್ನು ಈ ಕೆಳಕಂಡಂತೆ ಮಾರ್ಪಡಿಸಿ ನಿಗಧಿಪಡಿಸಲಾಗಿತ್ತು.

<u>ರಾಜ್ಯ ಹೆದ್ದಾರಿಯ ದಾಖಲಿತ "ರಸ್ತೆ ಭೂ ಗಡಿ"ಯ ಅಂಚಿನಿಂದ "ಕಟ್ಟಡ ರೇಖೆ"ಯ ಅಂತರ</u>

| | |
|---|---|
| 1. ಸಿಟಿ ಕಾರ್ಪೋರೇಷನ್ ಪರಿಮಿತಿ : ಸಿಟಿ ಮುನ್ಸಿಪಲ್ ಕೌನ್ಸಿಲ್ ಪರಿಮಿತಿ : ಟೌನ್ ಮುನ್ಸಿಪಲ್ ಕೌನ್ಸಿಲ್ ಪರಿಮಿತಿ : ಟೌನ್ ಪಂಚಾಯತ್ ಪರಿಮಿತಿ : ಗ್ರಾಮ ಪಂಚಾಯತ್ ಪರಿಮಿತಿಯಲ್ಲಿ | 6 ಮೀಟರ್ |
| 2. ಸಿಟಿ ಕಾರ್ಪೋರೇಷನ್ ಪರಿಮಿತಿಯಿಂದ 15 ಕಿ.ಮೀ. ದೂರದವರೆಗೆ | 12 ಮೀಟರ್ |
| 3. ಸಿಟಿ ಮುನ್ಸಿಪಲ್ ಕೌನ್ಸಿಲ್ ಪರಿಮಿತಿಯಿಂದ 10 ಕಿ.ಮೀ. ದೂರದವರೆಗೆ | 12 ಮೀಟರ್ |
| 4. ಟೌನ್ ಮುನ್ಸಿಪಲ್ ಕೌನ್ಸಿಲ್ ಪರಿಮಿತಿ : ಟೌನ್ ಪಂಚಾಯತ್ ಪರಿಮಿತಿ : ಗ್ರಾಮ ಪಂಚಾಯತ್ ಪರಿಮಿತಿಯಿಂದ 5 ಕಿ.ಮೀ. ದೂರದವರೆಗೆ | 12 ಮೀಟರ್ |

ಆದರೆ, ಸದರಿ ಆದೇಶದಲ್ಲಿ ನಿಗಧಿಪಡಿಸಿದ್ದ ಪರಿಮಿತಿಯ ಅಂತರಕ್ಕಿಂತ ಕಡಿಮೆ ಅಂತರದಲ್ಲಿ ಹಲವು ಪಟ್ಟಣ / ಗ್ರಾಮಗಳು ಬರುತ್ತಿದ್ದು, ಈ ಪರಿಮಿತಿಗಳು ಒಂದರೊಳಗೊಂದು ಬರುವುದರಿಂದ ಇದನ್ನು ಜಾರಿಗೊಳಿಸುವಲ್ಲಿ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದು ಇದರಿಂದಾಗಿ ಕರ್ನಾಟಕ ಹೆದ್ದಾರಿ ಕಾಯ್ದೆಯ ಅನುಷ್ಠಾನದ ಮೂಲ ಉದ್ದೇಶವೇ ವಿಫಲವಾಗುವುದನ್ನು ಸರ್ಕಾರ ಮನಗಂಡು, ಉಲ್ಲೇಖ (2)ರ ಆದೇಶದಲ್ಲಿ ನಿಗಧಿಪಡಿಸಲಾಗಿದ್ದ ರಾಜ್ಯ ಹೆದ್ದಾರಿಗಳ ಕಟ್ಟಡ ರೇಖೆಗಳ ಅಂತರವನ್ನು ಉಲ್ಲೇಖ (3)ರ ಆದೇಶದಲ್ಲಿ ಈ ಕೆಳಕಂಡಂತೆ ಪರಿಷ್ಕರಿಸಿರುತ್ತದೆ.

ರಾಜ್ಯ ಹೆದ್ದಾರಿಯ ದಾಖಲಿತ "ರಸ್ತೆ ಭೂ ಗಡಿ"ಯ ಅಂಚಿನಿಂದ

| | |
|---|---|
| 1. ಸಿಟಿ ಕಾರ್ಪೊರೇಷನ್ ಪರಿಮಿತಿ :<br>ಸಿಟಿ ಮುನ್ಸಿಪಲ್ ಕೌನ್ಸಿಲ್ ಪರಿಮಿತಿ :<br>ಟೌನ್ ಮುನ್ಸಿಪಲ್ ಕೌನ್ಸಿಲ್ ಪರಿಮಿತಿ :<br>ಟೌನ್ ಪಂಚಾಯತಿ ಪರಿಮಿತಿ :<br>ಗ್ರಾಮ ಪಂಚಾಯತಿ ಪರಿಮಿತಿಯಲ್ಲಿ: | 6 ಮೀಟರ್ |
| 2. ಸಿಟಿ ಕಾರ್ಪೊರೇಷನ್ ಪರಿಮಿತಿಯಿಂದ 15 ಕಿ.ಮೀ. ದೂರದವರೆಗೆ | 12 ಮೀಟರ್ |

ಈ ಸಂಬಂಧ, ಹೆದ್ದಾರಿಗಳಲ್ಲಿ ಕಟ್ಟಡಗಳ ರೇಖೆಯನ್ನು ಗುರುತಿಸುತ್ತಿರುವ ಬಗ್ಗೆ ಸ್ಪಷ್ಟನೆ ಬೇಕೆಂದು ಇತರೆ ಇಲಾಖೆಗಳಿಂದ ಪ್ರಸ್ತಾವನೆಗಳು ಸ್ವೀಕೃತಗೊಂಡಿರುತ್ತದೆ. ನಗರಾಭಿವೃದ್ಧಿ ಇಲಾಖೆಯು, ಉಲ್ಲೇಖ (3) ರ ಆದೇಶದಲ್ಲಿ ಕ್ರ.ಸಂ 2 ರಲ್ಲಿ ತಿಳಿಸಿರುವ ಪ್ರದೇಶದಲ್ಲಿ ಕ್ರ.ಸಂ 1 ರಲ್ಲಿ ತಿಳಿಸಿರುವ ಪ್ರದೇಶಗಳು overlap ಆದಾಗ ಯಾವ ಅಂತರವನ್ನು ಪರಿಗಣಿಸಬೇಕು ಹಾಗೂ ಭೂ ದಾಖಲಿತ ರಸ್ತೆಗಡಿಯನ್ನು ಯಾವ ರೀತಿ ಗುರುತಿಸಬೇಕು ಎಂಬ ಸ್ಪಷ್ಟನೆಯನ್ನು ನೀಡುವಂತೆ ಕೋರಿರುತ್ತದೆ. ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-7 ಮಂಜೂರಾತಿಗೆ ಅಬಕಾರಿ ಇಲಾಖೆಯಿಂದ ನಿರಾಪೇಕ್ಷಣಾ ಪತ್ರ ಕೋರಿದಂತಹ ಸಂದರ್ಭಗಳಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಗಳ ವತಿಯಿಂದ ವಿಭಿನ್ನ ರೀತಿಯ ನಿರಾಪೇಕ್ಷಣಾ ಪತ್ರಗಳು ಸ್ವೀಕೃತವಾಗುತ್ತಿರುವುದರಿಂದ ಗೊಂದಲವುಂಟಾಗುತ್ತಿರುವುದರಿಂದ ಸೂಕ್ತ ನಿರ್ದೇಶನ ನೀಡುವಂತೆ ಅಬಕಾರಿ ಇಲಾಖೆಯು ಕೋರಿರುತ್ತದೆ.

ಈ ಹಿನ್ನಲೆಯಲ್ಲಿ ಹೆದ್ದಾರಿಗಳ ಇಕ್ಕೆಲಗಳಲ್ಲಿ ಕಟ್ಟಡ ರೇಖೆಯನ್ನು ಗುರುತಿಸುವ ಕುರಿತು ರಾಜ್ಯ ಲೋಕೋಪಯೋಗಿ ಇಲಾಖೆಯಿಂದ ಹೊರಡಿಸಲಾಗಿರುವ ಆದೇಶಗಳ ಮೇಲೆ ಈ ಕೆಳಕಂಡ ಸ್ಪಷ್ಟನೆಯನ್ನು ನೀಡಲಾಗುತ್ತಿದೆ.

1. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಟ್ಟಡ ರೇಖೆಯನ್ನು ಗುರುತಿಸಿ ನಿಗಧಿಪಡಿಸುವುದು ಕೇಂದ್ರ ಸರ್ಕಾರದಿಂದ ಹೊರಡಿಸಲಾಗುವ ಆದೇಶಕ್ಕೆ ಒಳಪಟ್ಟಿರುತ್ತದೆ ಹಾಗೂ ಈ ಕಾರ್ಯವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ/ವಲಯದ ಅಧಿಕಾರಿಗಳ ವತಿಯಿಂದ ನಿರ್ವಹಿಸಲಾಗುತ್ತದೆ.
2. ರಾಜ್ಯ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳು ಮಾತ್ರ ಒಳಪಡುತ್ತಿದ್ದು, ಲೋಕೋಪಯೋಗಿ ಇಲಾಖೆಯಿಂದ ಹೊರಡಿಸಲಾಗಿರುವ ಉಲ್ಲೇಖ (1) ಹಾಗೂ (3) ರ ಆದೇಶಗಳಲ್ಲಿ ತಿಳಿಸಿರುವಂತೆ ಆಯಾ ಪ್ರದೇಶಗಳಿಗೆ ತಕ್ಕಂತೆ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಲೋಕೋಪಯೋಗಿ ಇಲಾಖೆಯ ಹೆದ್ದಾರಿ ಪ್ರಾಧಿಕಾರವು ಕಟ್ಟಡಗಳ ರೇಖೆಗಳನ್ನು ಗುರುತಿಸಿ ನಿಗಧಿಪಡಿಸತಕ್ಕದ್ದು.